ಓ.ಎಸ್. ನಂ. 15/2023

ಪಿ.ಡಬ್ಲ್ಯು: 01 (ವಸಂತಕುಮಾರ್)

ದಿನಾಂಕಃ 09.01.2024 ರಂದು ಮುಖ್ಯ ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಶ್ರೀ BNR ವಕೀಲರಿಂದಃ

ಸಾಕ್ಷ್ಯ ರೂಪದಲ್ಲಿ ಹಾಜರು ಪಡಿಸಿರುವ ನನ್ನ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ತಿಳಿದುಕೊಂಡು ನಾನು ನನ್ನ ಸಹಿ ಮಾಡಿದ್ದೇನೆ.

ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ವಿವರ ಈ ಕೆಳಗಿನಂತಿವೆಃ

1. ದಿಃ 05.12.1981 ರ ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 01 ಎಂದು ಗುರುತಿಸಲಾಯಿತು. (ಅದರ ಬೆಲೆ 100/-ಕ್ಕಿಂತ ಕಡಿಮೆ ಇರುವುದರಿಂದ ಅದನ್ನು ನೊಂದಾಯಿಸಿರುವುದಿಲ್ಲ.) ಪ್ರತಿವಾದಿ ಪರ ವಕೀಲರು ಸದರಿ ದಾಖಲಾತಿಯನ್ನು ಸಾಭೀತುಪಡಿಸಿದರೆ ಮಾತ್ರ ಗುರುತಿಸಬೇಕೆಂದು ಆಕ್ಷೇಪಣೆ ಮಾಡಿರುತ್ತಾರೆ. ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ ಸದರಿ ಆಕ್ಷೇಪಣೆಯನ್ನು ಬದಿಗೊತ್ತಲಾಯಿತು.
2. ಸರ್ವೆ ನಂಬರ್ 54 ಎ ರ 26 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿಃ 02 ಎಂದು ಗುರುತಿಸಲಾಯಿತು.
3. ನಮೂನೆ-21 ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 03 ಎಂದು ಗುರುತಿಸಲಾಯಿತು.
4. 3 ನಮೂನೆ-12 ಮ್ಯುಟೇಶನ್ ರಜಿಸ್ಟರ ಪ್ರತಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿಃ 04 ಎಂದು ಗುರುತಿಸಲಾಯಿತು.
5. ಭೂಮಿ ಅರ್ಜಿ ಸ್ವೀಕೃತಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 05 ಎಂದು ಗುರುತಿಸಲಾಯಿತು.
6. 1 ನೇ ವಾದಿ ತಹಶೀಲ್ದಾರ್ ಕೊಟ್ಟುರು ಇವರಿಗೆ ಬರೆದ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 06 ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆಃ ಮುಕ್ತಾಯ.

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.